## ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ನೂರನಲವತ್ತೊಂದನೆಯ ಅಧಿವೇಶನವು ದಿನಾಂಕ:21.09.2020 ರಿಂದ 26.09.2020ರ ವರೆಗೆ ಒಟ್ಟು 06 ದಿನಗಳ ಉಪವೇಶನ ನಡೆಯಿತು. ಅಧಿವೇಶನದ ಒಟ್ಟು ಅವದಿ 40 ಗಂಟೆ 45 ನಿಮಿಷಗಳು. **(ವಿವರಣಾ ಪಟ್ಟಿ-1)**

### 01. ಸಂತಾಪ ಸೂಚನೆಗಳು

**ಈ ಕೆಳಕಂಡ ಗಣ್ಯವ್ಯಕ್ತಿಗಳು ನಿಧನರಾದುದಕ್ಕೆ ಸದನದಲ್ಲಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.**

| ಕ್ರ.ಸಂ | ಹೆಸರು | ಹೊಂದಿದ ಸ್ಥಾನಮಾನ | ದಿನಾಂಕ |
|---|---|---|---|
| 01 | ಶ್ರೀ ಪ್ರಣಬ್ ಮುಖರ್ಜಿ | ಮಾಜಿ ರಾಷ್ಟ್ರಪತಿಗಳು. | 21.09.2020 |
| 02 | ಶ್ರೀ ಎಂ.ವಿ. ರಾಜಶೇಖರನ್ | ಕೇಂದ್ರದ ಮಾಜಿ ಸಚಿವರು | 21.09.2020 |
| 03 | ಶ್ರೀ ಅಶೋಕ ಗಸ್ತಿ | ರಾಜ್ಯಸಭೆಯ ಹಾಲಿ ಸದಸ್ಯರು | 21.09.2020 |
| 04 | ಶ್ರೀ ಬಿ. ಸತ್ಯನಾರಾಯಣ | ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಹಾಲಿ ಸದಸ್ಯರು | 21.09.2020 |
| 05 | ಶ್ರೀ ರಾಜಾ ರಂಗಪ್ಪನಾಯಕ | ಲೋಕಸಭೆಯ ಮಾಜಿ ಸದಸ್ಯರು | 21.09.2020 |
| 06 | ಶ್ರೀಮತಿ ವಿನ್ನಿಫ್ರೆಡ್ ಎಫ್. ಫರ್ನಾಂಡಿಸ್ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 21.09.2020 |
| 07 | ಶ್ರೀ ಬಿ. ರಾಮಕೃಷ್ಣ | ಮಾಜಿ ಸಚಿವರು | 21.09.2020 |
| 08 | ಶ್ರೀ ಮದನ ಗೋಪಾಲ ನಾಯಕ್ | ಮಾಜಿ ಸಚಿವರು | 21.09.2020 |
| 09 | ಶ್ರೀ ಹೊಸ್ತೋಟ ಗಜಾನನ ಭಟ್ | ಯಕ್ಷಗಾನ ಕಲಾವಿದರು | 21.09.2020 |
| 10 | ಪ್ರೊ: ಕೆ.ಎಸ್. ನಿಸಾರ್ ಅಹಮದ್ | ಕನ್ನಡದ ಹೆಸರಾಂತ ಕವಿಗಳು | 21.09.2020 |
| 11 | ಡಾ: ಶ್ಯಾಮಲಾ ಜಿ. ಭಾವೆ | ಗಾನ ವಿದೂಷಿ | 21.09.2020 |
| 12 | ಶ್ರೀಮತಿ ಶಾಂತಾದೇವಿ ಕಣವಿ | ಹಿರಿಯ ಕಥೆಗಾರ್ತಿ | 21.09.2020 |
| 13 | ಡಾ: ಸುಭದ್ರಮ್ಮ ಮನ್ಸೂರ್ | ಹಿರಿಯ ರಂಗಭೂಮಿ ಕಲಾವಿದರು | 21.09.2020 |
| 14 | ಪಂಡಿತ್ ಜಸ್‌ರಾಜ್ | ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಹಾಡುಗಾರರು | 21.09.2020 |

| | | | |
|---|---|---|---|
| 15 | ಶ್ರೀ ಕೇಶವಾನಂದ ಭಾರತಿ | ಎಡನೀರು ಮಠ | 21.09.2020 |
| 16 | ಶ್ರೀ ಬೇಲೂರು ಕೃಷ್ಣಮೂರ್ತಿ | ಪ್ರಸಿದ್ಧ ಪತ್ತೇದಾರಿ ಕಾದಂಬರಿಕಾರರು | 21.09.2020 |
| 17 | ಶ್ರೀ ಎನ್.ಎಸ್. ಹುಚ್ಚರಾಯಪ್ಪ | ಹಿರಿಯ ಸ್ವಾತಂತ್ರ್ಯ ಹೋರಾಟಗಾರರು | 21.09.2020 |
| 19 | ಶ್ರೀ ಸುರೇಶ್ ಚನ್ನಬಸಪ್ಪ ಅಂಗಡಿ | ಹಾಲಿ ಕೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವರು ಹಾಗೂ ಲೋಕಸಭಾ ಸದಸ್ಯರು | 24.09.2020 |
| 20 | ಶ್ರೀ ಬಿ. ನಾರಾಯಣ ರಾವ್ | ವಿಧಾನ ಸಭೆಯ ಹಾಲಿ ಸದಸ್ಯರು | 25.09.2020 |
| 21 | ಡಾ: ಎಸ್.ಪಿ. ಬಾಲಸುಬ್ರಮಣ್ಯಂ | ಖ್ಯಾತ ಹಿನ್ನಲೆ ಗಾಯಕರು | 26.09.2020 |

## 02. ನೂತನ ಸದಸ್ಯರ ಪರಿಚಯ

ದಿನಾಂಕ:21.09.2020ರಂದು ಮಾನ್ಯ ಸಭಾನಾಯಕರು ನೂತನವಾಗಿ ಆಯ್ಕೆಯಾಗಿರುವ ಶಾಸಕರುಗಳನ್ನು ಸ್ವಾಗತಿಸಿ ಅಭಿನಂದನೆ ಸಲ್ಲಿಸಿದರು.

ಶ್ರೀಯುತರುಗಳಾದ :-

01. ಸಿ.ಪಿ. ಯೋಗೇಶ್ವರ್
02. ಅಡಗೂರ್ ಹೆಚ್. ವಿಶ್ವನಾಥ್
03. ಭಾರತಿ ಶೆಟ್ಟಿ
04. ಶಾಂತಾರಾಮ್ ಬುಡ್ನ ಸಿದ್ಧಿ
05. ಡಾ: ತಳವಾರ್ ಸಾಬಣ್ಣ
06. ಗೋವಿಂದರಾಜು
07. ಬಿ.ಕೆ. ಹರಿಪ್ರಸಾದ್
08. ಎನ್. ನಾಗರಾಜು (ಎಂ.ಟಿ.ಬಿ)
09. ಪ್ರತಾಪ್‌ಸಿಂಹ ನಾಯಕ್ ಕೆ.
10. ಆರ್. ಶಂಕರ್
11. ಸುನೀಲ್ ವಲ್ಯಾಪುರೆ

## 03. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

01. ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 04 ಪಟ್ಟಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. (ವಿವರಣಾ ಪಟ್ಟಿ–2)

02. ದಿನಾಂಕ:22.09.2020ರಂದು ಮಾನ್ಯಮುಖ್ಯಮಂತ್ರಿಗಳು ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ 2018–19ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಸಂಪುಟ 1 ಮತ್ತು 2) ಹಾಗೂ ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ(ಸಂಖ್ಯೆ 1)ನ್ನು ಸಭೆಯಲ್ಲಿ ಮಂಡಿಸಿದರು.

03. ದಿನಾಂಕ:23.09.2020ರಂದು ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರ ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯಲ್ಲಿ ಮಂಡಿಸಿದರು.

04. ದಿನಾಂಕ:25.09.2020ರಂದು ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ವಿಶೇಷ ವರದಿಯನ್ನು ಮಂಡಿಸಿದರು.

## 04. ಕಾರ್ಯದರ್ಶಿಯವರ ವರದಿ

ದಿನಾಂಕ:21.09.2020ರಂದು ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಅಂಗೀಕರಿಸಲಾದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು. (ವಿವರಣಾ ಪಟ್ಟಿ–3)

## 05. ಪ್ರಶ್ನೆಗಳು

ಪ್ರಸ್ತುತ ಅಧಿವೇಶನದಲ್ಲಿ 1282 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 120 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 27 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ದಿನಾಂಕ:23.09.2020 ರಿಂದ 25.09.2020ರವರೆಗಿನ 45 ಚುಕ್ಕೆ ಗುರುತಿನ ಪ್ರಶ್ನೆಗಳ ಪೈಕಿ 42 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 1162 ಪ್ರಶ್ನೆಗಳ ಪೈಕಿ 614 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

## 06. ಶೂನ್ಯವೇಳೆ

ಪ್ರಸ್ತುತ ಅಧಿವೇಶನದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನು ವಿವರಣಾ ಪಟ್ಟಿ–4ರಲ್ಲಿ ವಿವರಿಸಿದೆ.

## 07. ಪ್ರಕಟಣೆ

01. ದಿನಾಂಕ:21.09.2020ರಂದು ಮಾನ್ಯ ಸಭಾಪತಿಯವರು ದಿನಾಂಕ 18.09.2020ರಿಂದ ಅಧಿವೇಶನ ಮುಕ್ತಾಯವಾಗುವವರೆಗೆ ವಿಧಾನಸೌಧದ ನೆಲಮಹಡಿಯಲ್ಲಿರುವ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ RTPCR ಪರೀಕ್ಷೆಯನ್ನು ನಡೆಸಲು ಸೂಕ್ತ ವ್ಯವಸ್ಥೆಗಳನ್ನು ಮಾಡಲಾಗಿದ್ದು ಮಾನ್ಯ ಶಾಸಕರುಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಪ್ರಕಟಿಸಿದರು.

02. ದಿನಾಂಕ:21.09.2020ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ರಚಿಸಿರುವ ಬಗ್ಗೆ ಪ್ರಕಟಿಸಲಾಯಿತು.

03. ದಿನಾಂಕ:21.09.2020ರಂದು ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡುವ ಸದಸ್ಯರ ಪಟ್ಟಿಯನ್ನು ಪ್ರಕಟಿಸಲಾಯಿತು.

04. ದಿನಾಂಕ:22.09.2020ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನವನ್ನು ಪ್ರಕಟಿಸಲಾಯಿತು.

05. ದಿನಾಂಕ:23.09.2020ರಂದು ಮಾನ್ಯ ಸದಸ್ಯರಾದ ಶ್ರೀ ಎಸ್. ರುದ್ರೇಗೌಡ ಅವರ ಹಾಜರಾತಿ ವಿನಾಯಿತಿಗೆ ಸದನದ ಅನುಮತಿ ಪಡೆಯಲಾಯಿತು.

06. ದಿನಾಂಕ:23.09.2020ರಂದು ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿರುವ ಛಾಯಾಚಿತ್ರ ಪ್ರದರ್ಶನ ಕುರಿತು ಪ್ರಕಟಿಸಲಾಯಿತು.

07. ದಿನಾಂಕ:25.09.2020ರಂದು ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕ ಮಾಲಿಕೆಯಡಿ ಪ್ರಕಟಿಸುವ ದಿವಂಗತರಾದ ಎ.ಕೆ.ಸುಬ್ಬಯ್ಯ ಹಾಗೂ ಡಾ: ಮಹಾದೇವ ಬಣಕಾರ್‌ರವರ ಪುಸ್ತಕವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಬಿಡುಗಡೆಗೊಳಿಸುವ ಸಮಾರಂಭವನ್ನು ದಿನಾಂಕ: 26.09.2020ರಂದು ಶನಿವಾರ ಬೆಳಗ್ಗೆ 9.30 ಗಂಟೆಗೆ ಕೊಠಡಿ ಸಂಖ್ಯೆ : 334 (ಸಮ್ಮೇಳನಾ ಸಭಾಂಗಣಾ) ವಿಧಾನಸೌಧ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

08. ದಿನಾಂಕ: 25.09.2020ರಂದು ಕರ್ನಾಟಕ ವಿಧಾನ ಪರಿಷತ್ತಿನ ಜನತಾದಳದ ಶಾಸಕಾಂಗ ಪಕ್ಷ ನಾಯಕರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ತಮ್ಮ ಪತ್ರದಲ್ಲಿ ತಿಳಿಸಿರುವ ರೀತಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ಅಪ್ಪಾಜಿಗೌಡ ಇವರನ್ನು ಜನತಾದಳದ (ಜಾತ್ಯಾತೀತ) ಪಕ್ಷದ ಮುಖ್ಯ ಸಚೇತಕರಾಗಿ ಪರಿಗಣಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**08. ನಿಯಮ 59ರ ಮೇರೆಗೆ**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 59ರಡಿಯಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನು ವಿವರಣಾ ಪಟ್ಟಿ–5ರಲ್ಲಿ ವಿವರಿಸಿದೆ.

**09. ಗಮನ ಸೆಳೆಯುವ ಸೂಚನೆಗಳು**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 72ರಡಿಯಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನು ವಿವರಣಾ ಪಟ್ಟಿ–6ರಲ್ಲಿ ವಿವರಿಸಿದೆ.

**10. ನಿಯಮ 330ರ ಮೇರೆಗೆ ಚರ್ಚೆ**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 330ರಡಿಯಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನು ವಿವರಣಾ ಪಟ್ಟಿ–7ರಲ್ಲಿ ವಿವರಿಸಿದೆ.

**11. ಚುನಾವಣಾ ಪ್ರಸ್ತಾವ**

01. ದಿನಾಂಕ:22.09.2020ರಂದು ವಿಧಾನ ಮಂಡಲದ ಸ್ಥಾಯಿ ಸಮಿತಿಗಳು/ವಿಧಾನ ಪರಿಷತ್ತಿನ ಸಮಿತಿಗಳಿಗೆ ಚುನಾವಣೆ ನಡೆಸುವ ಸಂಬಂಧ ಪ್ರಸ್ತಾವವನ್ನು ಮಂಡಿಸಲಾಯಿತು. ದಿನಾಂಕ:25.09.2020ರಂದು ಸದರಿ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಸದಸ್ಯರನ್ನು ನಾಮ ನಿರ್ದೇಶಿಸುವ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

02. ಈ ಕೆಳಕಂಡ ವಿಶ್ವವಿದ್ಯಾನಿಲಯಗಳಿಗೆ/ಪ್ರಾಧಿಕಾರಗಳಿಗೆ ಚುನಾವಣೆ ಬದಲು ಸದಸ್ಯರುಗಳನ್ನು ನಾಮನಿರ್ದೇಶಿಸುವ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ವ್ಯವಸ್ಥಾಪಕ ಮಂಡಳಿ)
* ಕರ್ನಾಟಕ ಹಂಪಿ ವಿಶ್ವವಿದ್ಯಾಲಯ (ಗೌರ್ನಿಂಗ್ ಕೌನ್ಸಿಲ್)
* ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ಪ್ರಶಾಸನ ಸಭೆ)
* ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಮಿತಿ

**12. ವರದಿಗಳನ್ನೊಪ್ಪಿಸುವುದು**

| ಕ್ರಮ ಸಂಖ್ಯೆ | ಸಮಿತಿಯ ಹೆಸರು | ಸಲ್ಲಿಸಿದ ದಿನಾಂಕ | ವರದಿ ಸಂಖ್ಯೆ |
|---|---|---|---|
| 1 | 2020ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಧೇಯಕದ ಜಂಟಿ ಪರಿಶೀಲನಾ ಸಮಿತಿ | 22.09.2020 | ವಿಶೇಷ ವರದಿ |
| 2 | ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ | 22.09.2020 | 32 |

| | | | |
|---|---|---|---|
| **3** | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | 22.09.2020 | 03 |
| **4** | ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ | 22.09.2020 | 02 |
| **5** | ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | 23.09.2020 | ವಿಶೇಷ ವರದಿ |
| **6** | ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ | 25.09.2020 | 4 |
| **7** | ಸದಸ್ಯರುಗಳು ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ | 25.09.2020 | 1 |

## 13. ಪ್ರಸ್ತಾವಗಳು

01. ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ಇನ್ನೂ 6 ತಿಂಗಳು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

02. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ಇನ್ನೂ 6 ತಿಂಗಳು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

## 14. ಶಾಸನ ರಚನೆ

ಪ್ರಸ್ತುತ ಅಧಿವೇಶನದಲ್ಲಿ ಮಂಡಿಸಿ ಅಂಗೀಕರಿಸಲಾದ ವಿಧೇಯಕಗಳ ಪಟ್ಟಿಯನ್ನು ವಿವರಣಾ ಪಟ್ಟಿ–8 ರಲ್ಲಿ ವಿವರಿಸಿದೆ.

## 15. ಅರ್ಧಗಂಟೆ ಕಾಲಾವಧಿ ಚರ್ಚೆ

ಕೊರೋನಾ ಸಂಬಂಧವಾಗಿ ಖರೀದಿಸಲಾದ ವಿವಿಧ ಸಾಮಗ್ರಿಗಳ ಬಗ್ಗೆ ದಿನಾಂಕ:21.09.2020ರ ಚುಕ್ಕೆ ಗುರುತಿನ **ಪ್ರಶ್ನೆ ಸಂಖ್ಯೆ:05 (112+113)ಕ್ಕೆ** ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು **ಶ್ರೀ ಎಂ.ನಾರಾಯಣಸ್ವಾಮಿ,** ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಚರ್ಚಿಸಿದರು.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು.

**16. ವಿತ್ತೀಯ ಕಾರ್ಯಕಲಾಪ**

ದಿನಾಂಕ:23.09.2020ರಂದು ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 2020–2021ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಮಂಡಿಸಿದರು.

**17. ಸಚಿವರ ಹೇಳಿಕೆ**

ದಿನಾಂಕ:23.09.2020ರಂದು ನಿಯಮ 72ರಲ್ಲಿ ಪ್ರಸ್ತಾಪಿಸಿದಂತೆ ವಿಧಾನಸೌಧದ ಮುಂಭಾಗದಲ್ಲಿ ಶ್ರೀ ಪಂಡಿತ್ ಜವಾಹರಲಾಲ್ ನೆಹರುರವರ ಪ್ರತಿಮೆಯನ್ನು ಯಥಾಸ್ಥಳದಲ್ಲಿ ಪುನರ್ ಪ್ರತಿಷ್ಠಾಪಿಸುವುದಾಗಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿಕೆ ನೀಡಿದರು.

**18. ಅರ್ಜಿಗಳನ್ನೊಪ್ಪಿಸುವುದು**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಸಲ್ಲಿಸಿದ ದಿನಾಂಕ | ವಿಷಯ |
|---|---|---|---|
| 1 | **ಶ್ರೀ ಮರಿತಿಬ್ಬೇಗೌಡ** | 24.09.2020 | ದಿನಾಂಕ:01.04.2006ರ ಪೂರ್ವದಲ್ಲಿ ನೇಮಕವಾಗಿ ನಂತರ ಅನುದಾನಕ್ಕೊಳಪಟ್ಟು ಪಿಂಚಣಿ ವಂಚಿತರಾದ 15 ಮಂದಿ ಅನುದಾನಿತ ಸಿಬ್ಬಂದಿಗಳಿಗೆ ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಹೊರತಾಗಿ ತೀರ್ಪಿನಲ್ಲಿ ಸೂಚಿಸಿದ ಸೌಲಭ್ಯವನ್ನು ನೀಡದಿರುವ ಕುರಿತು |
| 2 | **ಶ್ರೀ ಎಂ.ಎ. ಗೋಪಾಲಸ್ವಾಮಿ** | 24.09.2020 | ಕುಂದಾಪುರ ತಾಲ್ಲೂಕು ಅಂಪಾರು ಗ್ರಾಮದ ಸರ್ಕಾರಿ ಅನಾಧೀನ ಭೂಮಿ ಸ.ನಂ.311 ಹಾಗೂ ಸ.ನಂ 263ನ್ನು ಸಂರಕ್ಷಿತ ಅರಣ್ಯವನ್ನಾಗಿ ಘೋಷಿಸಿ ಅರಣ್ಯ ಭೂಮಿಯನ್ನು ಸಂರಕ್ಷಿಸುವ ಕುರಿತು |
| 3 | **ಶ್ರೀ ಕೆ.ಹರೀಶ್ ಕುಮಾರ್** | 24.09.2020 | ಉಡುಪಿ ಜಿಲ್ಲಾ ಮೂರ್ತೆದಾರರ ಸಹಕಾರಿ ಮಹಾಮಂಡಲದ ಮಾಜಿ ಕಾರ್ಯನಿರ್ವಹಣಾಧಿಕಾರಿಯವರ ಹಣ ದುರುಪಯೋಗ ಮಾಡಿರುವ ಬಗ್ಗೆ ಹಾಗೂ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಮೈಸೂರು ಪ್ರಾಂತ್ಯ ಇವರ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿಯಿದ್ದ ಪ್ರಕರಣದ ಕಡತ ನಾಪತ್ತೆ ಮಾಡಿ ತನಿಖೆಗೆ ವಿಳಂಬ ಮಾಡುವ ಮೂಲಕ ಅವ್ಯವಹಾರದಲ್ಲಿ ಭಾಗಿಯಾಗಿದ್ದ ಅಧಿಕಾರಿಗಳಿಗೆ ರಕ್ಷಣೆ ನೀಡಿರುವುದರಿಂದ ಸಹಕಾರಿ ಮಹಾಮಂಡಲಕ್ಕೆ ಆರ್ಥಿಕ ನಷ್ಟ ಉಂಟಾಗಿರುವ ಬಗ್ಗೆ |

## 19. ನಿರ್ಣಯ

ದಿನಾಂಕ:25.09.2020ರಂದು ಈ ಕೆಳಕಂಡ ನಿರ್ಣಯವನ್ನು ಮಂಡಿಸಿ ಅಂಗೀಕರಿಸಲಾಯಿತು.

"ದಿ ಮೈಸೂರು ಲ್ಯಾಂಪ್ಸ್ ವರ್ಕ್ಸ್ ಲಿಮಿಟೆಡ್ ಸಂಸ್ಥೆ ಹಾಗೂ ಸಂಸ್ಥೆಗೆ ಸೇರಿದ ಸ್ವತ್ತುಗಳನ್ನು ಯಾವುದೇ ಕಂಪೆನಿ ಕಾಯ್ದೆಯಲ್ಲಿ ಬರುವ ಸರ್ಕಾರಿ ಸ್ವಾಮ್ಯದ ಉದ್ದಿಮೆ/ಸಂಸ್ಥೆಗಳು ಸೇರಿದಂತೆ ಯಾವುದೇ ವ್ಯಕ್ತಿಗಳಿಗೆ ಪರಭಾರೆ ಮಾಡದಂತೆ ನೇರವಾಗಿ ಸರ್ಕಾರವೇ ತನ್ನ ಅಧೀನಕ್ಕೆ ಪಡೆದು ಆಸ್ಪತ್ರೆ, ಮಕ್ಕಳ ಪಾರ್ಕ್, ಉದ್ಯಾನವನ ಸೇರಿದಂತೆ ಸಾರ್ವಜನಿಕ ಉದ್ದೇಶಕ್ಕೆ ಮಾತ್ರ ಬಳಸತಕ್ಕದ್ದು".

## 20. ಧರಣಿ ಮತ್ತು ಸಭಾತ್ಯಾಗ

1) ದಿನಾಂಕ:22.09.2020ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಆಡಳಿತ ಪಕ್ಷದ ಸದಸ್ಯರು ಹಾಗೂ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಡೆಸಿದರು.

2) ದಿನಾಂಕ:23.09.2020ರಂದು ಗಮನ ಸೆಳೆಯುವ ಸೂಚನೆಗೆ ಸರ್ಕಾರ ನೀಡಿದ ಉತ್ತರವನ್ನು ವಿರೋಧಿಸಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಡೆಸಿದರು.

## 21. ಅಧಿವೇಶನ ಮುಂದೂಡಿಕೆ

ದಿನಾಂಕ:21.09.2020ರಂದು ಪ್ರಾರಂಭಗೊಂಡ ವಿಧಾನ ಪರಿಷತ್ತಿನ 141ನೆಯ ಅಧಿವೇಶನವನ್ನು ದಿನಾಂಕ:26.09.2020ರಂದು ರಾಷ್ಟ್ರಗೀತೆಯೊಂದಿಗೆ ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಯಿತು.

**ವಿವರಣಾ ಪಟ್ಟಿ–1**

| ಕ್ರಮ ಸಂಖ್ಯೆ | ಅಧಿವೇಶನ ನಡೆದ ದಿನಾಂಕ | ಪ್ರಾರಂಭಗೊಂಡ ಸಮಯ | ಅಂತ್ಯಗೊಂಡ ಸಮಯ | ಒಟ್ಟು ಸಮಯ |
|---|---|---|---|---|
| **1** | 21.09.2020 | ಬೆ.11.25<br>ಮ.01.10<br>ಸಾ.04.15 | ಮ.12.50<br>ಮ.02.55<br>ರಾ.08.18 | 1.25<br>1.45<br>4.03 |
| **2** | 22.09.2020 | ಬೆ.10.56<br>ಮ.03.35 | ಮ.02.30<br>ಮ.06.33 | 03.34<br>02.58 |
| **3** | 23.09.2020 | ಬೆ.10.55<br>ಮ.03.53 | ಮ.02.00<br>ಸಾ.05.35 | 03.05<br>01.43 |
| **4** | 24.09.2020 | ಬೆ.10.25<br>ಮ.12.05<br>ಮ.03.26 | ಬೆ.11.24<br>ಮ.01.54<br>ಸಾ.05.25 | 00.59<br>01.49<br>01.59 |
| **5** | 25.09.2020 | ಬೆ.10.22<br>ಮ.12.00<br>ಮ.03.36 | ಬೆ.11.35<br>ಮ.02.20<br>ಸಾ.06.43 | 01.13<br>02.20<br>03.07 |
| **6** | 26.09.2020 | ಬೆ.11.10<br>ಬೆ.11.48<br>ಮ.03.36<br>ಸಾ.07.00<br>ರಾ.10.05<br>ರಾ.11.20 | ಬೆ.11.30<br>ಮ.02.16<br>ಸಾ.06.20<br>ರಾ.09.33<br>ರಾ.11.10<br>ರಾ.12.55 | 00.20<br>02.28<br>02.44<br>02.33<br>01.05<br>01.35 |
| | | | **ಒಟ್ಟು ಸಮಯ** | **40.45** |

**ವಿವರಣಾ ಪಟ್ಟಿ – 4**

**(ಶೂನ್ಯವೇಳೆ ಪ್ರಸ್ತಾವಗಳು)**

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ ಶ್ರೀಯುತರುಗಳಾದ: | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 1 | **ಬಸವರಾಜ ಶಿವಲಿಂಗಪ್ಪ ಹೊರಟ್ಟಿ** | 21.09.2020 | ರಾಜ್ಯದಲ್ಲಿ ಮಕ್ಕಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಸುಲಭವಾಗಿ ಡ್ರಗ್ಸ್ ಮತ್ತು ಗಾಂಜಾ ಸಿಗುತ್ತಿದ್ದು, ಅದರ ಸೇವನೆಯಿಂದ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ತಡೆಯುವ ಕುರಿತು. | ಮಾನ್ಯ ಸಭಾನಾಯಕರು, ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 2 | **ಕೆ.ಸಿ. ಕೊಂಡಯ್ಯ** | 22.09.2020 | ರಾಜ್ಯದ ಕೈಮಗ್ಗ ಸೀರೆಗಳಿಗೆ ಮಾರುಕಟ್ಟೆ, ಕಚ್ಚಾ ಪದಾರ್ಥ ಸೇರಿದಂತೆ ಇತರೆ ವಸ್ತುಗಳ ಪೂರೈಕೆಗೆ ಸುವ್ಯವಸ್ಥೆ ಹಾಗೂ ಸರ್ಕಾರದಿಂದ ಸೀರೆ ಖರೀದಿಗೆ ತ್ವರಿತ ವ್ಯವಸ್ಥೆ ಕೈಗೊಳ್ಳುವ ಕುರಿತು. | ಮಾನ್ಯ ಸಭಾನಾಯಕರು, ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 3 | **ಯು.ಬಿ. ವೆಂಕಟೇಶ್** | 22.09.2020 | ಕೆ.ಪಿ.ಎಸ್.ಸಿ. ವತಿಯಿಂದ ಮೂಲವೃಂದ ಮತ್ತು ಕಲ್ಯಾಣ ಕರ್ನಾಟಕ ವೃಂದದ ಗ್ರೂಪ್ "ಎ" ಮತ್ತು"ಬಿ" ತಾಂತ್ರಿಕ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದ್ದು, ಪ್ರಸ್ತುತ ಅಂತಿಮ ಪದವಿ ಪರೀಕ್ಷೆ ನಡೆಯದ ಕಾರಣ ಸದರಿ ಪರೀಕ್ಷೆಗೆ ಹಾಜರಾಗಲು ಅನಾನುಕೂಲವಾಗಿದ್ದು ಅನ್ಯಾಯವನ್ನು ಸರಿಪಡಿಸುವ ಬಗ್ಗೆ | ದಿನಾಂಕ:04.12.2020 ರಂದು ಉತ್ತರ ಬಂದಿರುತ್ತದೆ. |
| 4 | **ಆಯನೂರು ಮಂಜುನಾಥ** | 22.09.2020 | ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ ಗೌರವಧನ ಪಾವತಿ ಮಾಡದಿರುವ ಕುರಿತು. | ಮಾನ್ಯ ಮುಖ್ಯಮಂತ್ರಿಯವರು ಉತ್ತರಿಸಿದರು. |
| 5 | **ಬಿ.ಕೆ. ಹರಿಪ್ರಸಾದ್** | 22.09.2020 | ಬೆಂಗಳೂರಿನಲ್ಲಿ ಇ–ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಮತ್ತು ಸಂಸ್ಕರಣೆಗೆ ಸರಿಯಾದ ವ್ಯವಸ್ಥೆ ಇಲ್ಲದೇ ಪರಿಸರ, ಮಕ್ಕಳ ಹಾಗೂ ಹಿರಿಯ ನಾಗರೀಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಕುರಿತು. | ಮಾನ್ಯ ಸಭಾನಾಯಕರು, ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |

| | | | | |
|---|---|---|---|---|
| 6 | **ಎಂ.ಎ. ಗೋಪಾಲಸ್ವಾಮಿ** | 23.09.2020 | ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಅವ್ಯವಸ್ಥೆಯಲ್ಲಿದ್ದು ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸುವ ಕುರಿತು. | ದಿನಾಂಕ: 24.09.2020 ರಂದು ಉತ್ತರವನ್ನು ಮಂಡಿಸಲಾಯಿತು |
| 7 | **ಮರಿತಿಬ್ಬೇಗೌಡ** | 23.09.2020 | ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಬಾಕಿ ಇರುವ ವೇತನವನ್ನು ಪಾವತಿಸುವ ಕುರಿತು. | ದಿನಾಂಕ:04.12.2020 ರಂದು ಉತ್ತರ ಬಂದಿರುತ್ತದೆ. |
| 8 | **ಎನ್. ಅಪ್ಪಾಜಿಗೌಡ** | 23.09.2020 | ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ನಾಗಮಂಗಲ-ಶ್ರವಣಬೆಳಗೊಳ ಮುಖ್ಯ ರಸ್ತೆ ಕಾಮಗಾರಿ ವಿಳಂಭವಾಗಿ, ಜನಸಾಮಾನ್ಯರ ಸಂಚಾರಕ್ಕೆ ತೊಂದರೆಯಾಗುತ್ತಿರುವ ಕುರಿತು. | ಮಾನ್ಯ ಸಭಾನಾಯಕರು, ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 9 | **ಕೆ.ಸಿ. ಕೊಂಡಯ್ಯ** | 23.09.2020 | ಕರ್ನಾಟಕ ಲೋಕಸೇವಾ ಆಯೋಗವು ನಾನಾ ಇಲಾಖೆಗಳ ಹುದ್ದೆಗಳಿಗೆ ಅರ್ಹರನ್ನು ಆರಿಸಿ ನೇಮಕ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವಲ್ಲಿ ಆಗುತ್ತಿರುವ ವಿಳಂಬದ ಕುರಿತು. | ದಿನಾಂಕ: 26.09.2020 ರಂದು ಉತ್ತರವನ್ನು ಮಂಡಿಸಲಾಯಿತು |
| 10 | **ಯು.ಬಿ. ವೆಂಕಟೇಶ್** | 23.09.2020 | ಸರ್ಕಾರದ ಪಾರದರ್ಶಕ ಆಡಳಿತಕ್ಕೆ ಸಹಕಾರಿಯಾಗಿರುವ ಮಾಹಿತಿ ಹಕ್ಕು ಆಯೋಗದ ಕಾಯ್ದೆಯಡಿ ಶೀಘ್ರವಾಗಿ ಮೇಲ್ಮನವಿಗಳನ್ನು ಇತ್ಯರ್ಥಗೊಳಿಸುವ ಕುರಿತು. | ಮಾನ್ಯ ಸಭಾನಾಯಕರು, ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 11 | **ಕೆ.ಎ. ತಿಪ್ಪೇಸ್ವಾಮಿ** | 23.09.2020 | ರಾಜ್ಯದಲ್ಲಿ ಉಂಟಾಗಿರುವ ಯೂರಿಯಾ ರಸಗೊಬ್ಬರ ಪೂರೈಕೆ ಕೊರತೆಯನ್ನು ನೀಗಿಸಿ ಸರ್ಕಾರ ರೈತರ ನೆರವಿಗೆ ಸ್ಪಂದಿಸುವ ಕುರಿತು. | ದಿನಾಂಕ: 24.09.2020 ರಂದು ಉತ್ತರವನ್ನು ಮಂಡಿಸಲಾಯಿತು |

**ವಿವರಣಾ ಪಟ್ಟಿ – 5**

**ನಿಯಮ 59**

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ ಶ್ರೀಯುತರುಗಳಾದ: | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 1 | **ಎಸ್.ಆರ್. ಪಾಟೀಲ್,** ಮಾನ್ಯ ವಿರೋಧ ಪಕ್ಷದ ನಾಯಕರು | 21.09.2020 | ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಭಾರಿ ಮಳೆಯಿಂದಾಗಿ ಅಪಾರ ಪ್ರಮಾಣದ ಹಾನಿಯಾಗಿರುವ ಕುರಿತು | ನಿಯಮ 68ಕ್ಕೆ ಪರಿವರ್ತಿಸಲಾಯಿತು. |
| 2 | **ಎಸ್.ಆರ್. ಪಾಟೀಲ್,** ಮಾನ್ಯ ವಿರೋಧ ಪಕ್ಷದ ನಾಯಕರು | 22.09.2020 | ಉತ್ತರ ಕರ್ನಾಟಕದ ಮಹತ್ವದ ನೀರಾವರಿ ಯೋಜನೆಯಾದ ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗೆ ಚಾಲನೆ ನೀಡಿ ಉತ್ತರ ಕರ್ನಾಟಕ ಭಾಗದ ಸುಮಾರು 7 ಜಿಲ್ಲೆಗಳ 14.67 ಲಕ್ಷ ಎಕರೆ ಪ್ರದೇಶಗಳಿಗೆ 130 ಟಿ.ಎಂ.ಸಿ ನೀರನ್ನೊದಗಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸುವ ಹಾಗೂ ಮಹಾದಾಯಿ ಯೋಜನೆಗೆ ಹೊರಡಿಸಿರುವ ಗೆಜೆಟ್ ನೋಟಿಫಿಕೇಷನ್ ರೀತ್ಯಾ ಈ ಯೋಜನೆಗೂ ಗೆಜೆಟ್ ನೋಟಿಫಿಕೇಷನ್ ಹೊರಡಿಸುವ ಬಗ್ಗೆ | ನಿಯಮ 68ಕ್ಕೆ ಪರಿವರ್ತಿಸಿ ದಿನಾಂಕ:25.09.2020ರಂದು ಚರ್ಚಿಸಲಾಯಿತು. ದಿನಾಂಕ:26.09.2020ರಂದು ಉತ್ತರಿಸಲಾಯಿತು. |
| 3 | **ಶ್ರೀ ಎಸ್.ಆರ್.ಪಾಟೀಲ್,** ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು | 24.09.2020 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ, ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯಲ್ಲಿ ನಿರ್ಮಾಣವಾಗುತ್ತಿರುವ ವಸತಿ ಸಮುಚ್ಚಯ ಕಾಮಗಾರಿಗಳಲ್ಲಿ ಭಾರೀ ಅವ್ಯವಹಾರ ನಡೆದಿರುವ ಬಗ್ಗೆ | ನಿಯಮ 330ಕ್ಕೆ ಪರಿವರ್ತಿಸಲಾಯಿತು. |
| 4 | **ಶ್ರೀ ಎಸ್.ಆರ್.ಪಾಟೀಲ್,** ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು | 25.09.2020 | ಬೆಂಗಳೂರಿನ ಪುಲಿಕೇಶಿನಗರ ವಿಧಾನ ಸಭೆ ಕ್ಷೇತ್ರದ ಡಿ.ಜೆ.ಹಳ್ಳಿ ಮತ್ತು ಕೆ.ಜೆ.ಹಳ್ಳಿ ಹಾಗೂ ಕಾವಲ್ ಭೈರಸಂದ್ರದಲ್ಲಿ ದಿನಾಂಕ:11.08.2020ರಂದು ನಡೆದ ಗೋಲಿಬಾರ್‌ನಲ್ಲಿ 4 ಜನ ಮೃತಪಟ್ಟಿದ್ದು, ಈ ಸಂಬಂಧ ಪೊಲೀಸರು ಅಮಾಯಕರನ್ನು ಬಂಧಿಸಿದ್ದರಿಂದ ಗಲಭೆ ಉಂಟಾಗಿ ಸ್ಥಳೀಯ ಜನರ ಆಸ್ತಿ ಪಾಸ್ತಿಗಳು ಹಾಳಾಗಿರುವುದರ ಬಗ್ಗೆ | ನಿಯಮ 330ಕ್ಕೆ ಪರಿವರ್ತಿಸಿ ದಿನಾಂಕ:26.09.2020ರಂದು ಉತ್ತರಿಸಲಾಯಿತು. |

## ವಿವರಣಾ ಪಟ್ಟಿ – 6

## ಗಮನ ಸೆಳೆಯುವ ಸೂಚನೆಗಳು

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ ಶ್ರೀಯುತರುಗಳಾದ: | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 1 | **ಶ್ರೀಮತಿ ಭಾರತಿ ಶೆಟ್ಟಿ** ಮತ್ತು **ಶ್ರೀ ಲಹರ್ ಸಿಂಗ್ ಸಿರೋಯಾ** | 21.09.2020 | ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಮಾದಕ ವಸ್ತುಗಳ ಲಭ್ಯತೆ, ಸಾಗಾಟ ಮತ್ತು ಮಾರಾಟದ ಮೇಲಿನ ಅನಿಯಂತ್ರಣದಿಂದಾಗಿ ಸಮಾಜದ ಮೇಲೆ ಉಂಟುಮಾಡುತ್ತಿರುವ ದುಷ್ಪರಿಣಾಮ ಹಾಗೂ ಈ ನಿಟ್ಟಿನಲ್ಲಿ ಅಗತ್ಯ ಕಾನೂನು ನಿಯಮಗಳನ್ನು ಬಲಪಡಿಸುವ ಕುರಿತು | ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |
| 2 | **ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ** | 21.09.2020 | ಸುಗ್ರೀವಾಜ್ಞೆ ಮೂಲಕ ಕರ್ನಾಟಕ ಭೂ ಸುಧಾರಣೆ ಕಾಯ್ದೆಗೆ ತಂದಿರುವ ತಿದ್ದುಪಡಿ ರೈತಾಪಿ ವರ್ಗಕ್ಕೆ ಮಾರಕವಾಗಿರುವುದರಿಂದ ತಿದ್ದುಪಡಿಯನ್ನು ಹಿಂಪಡೆಯುವ ಬಗ್ಗೆ | ವಿಧೇಯಕವನ್ನು ಚರ್ಚಿಸುವಾಗ ಉತ್ತರಿಸುವುದಾಗಿ ಮಾನ್ಯ ಕಂದಾಯ ಸಚಿವರು ತಿಳಿಸಿದರು. |
| 3 | **ಶ್ರೀ ಬಸವರಾಜ ಪಾಟೀಲ ಇಟಗಿ** ಮತ್ತು **ಶ್ರೀ ಪ್ರಕಾಶ್ ಕೆ. ರಾಥೋಡ್** | 21.09.2020 | ಆಲಮಟ್ಟಿ ಜಲಾಶಯದ ಅಣೆಕಟ್ಟಿನ ಎತ್ತರವನ್ನು 519 ರಿಂದ 524 ಮೀಟರ್‌ಗೆ ಎತ್ತರಿಸುವ ಬಗ್ಗೆ | |
| 4 | **ಶ್ರೀ ಕೆ. ಗೋವಿಂದರಾಜು** | 23.09.2020 | ವಿಧಾನಸೌಧದ ಮುಂಭಾಗದಲ್ಲಿ ಶ್ರೀ ಪಂಡಿತ್ ಜವಾಹರಲಾಲ್ ನೆಹರುರವರ ಪ್ರತಿಮೆಯನ್ನು ಯಥಾಸ್ಥಳದಲ್ಲಿ ಪುನರ್ ಪ್ರತಿಷ್ಠಾಪಿಸುವ ಕುರಿತು | ಮಾನ್ಯ ಸಭಾನಾಯಕರು ಉತ್ತರಿಸಿದರು. |
| 5 | **ಡಾ: ವೈ.ಎ. ನಾರಾಯಣಸ್ವಾಮಿ** | 23.09.2020 | ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ಆದಿ ಜಾಂಭವ ಅಭಿವೃದ್ಧಿ ನಿಗಮ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮಗಳಲ್ಲಿ 2015-16 ರಿಂದ 2019-20ರವರೆಗೆ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ | ಸದನದಲ್ಲಿ ಚರ್ಚಿಸಿದ ರೀತ್ಯಾ ಸದನ ಸಮಿತಿ ರಚಿಸಲಾಯಿತು. |

**ವಿವರಣಾ ಪಟ್ಟಿ – 7**

**ನಿಯಮ 330ರ ಅಡಿ ಪ್ರಸ್ತಾವಗಳು**

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ ಶ್ರೀಯುತರುಗಳಾದ: | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 1 | ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ | 21.09.2020 | ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಲಾಗಿರುವ ಜಾತಿವಾರು ಜನಗಣತಿ ವರದಿಯನ್ನು ಬಿಡುಗಡೆಗೊಳಿಸಿ ತ್ವರಿತವಾಗಿ ಅನುಷ್ಠಾನಗೊಳಿಸುವ ಕುರಿತು | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು. |
| 2 | **ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ** | 23.09.2020 | ಡಾ. ಸರೋಜಿನಿ ಮಹಿಷಿ ಪರಿಷ್ಕೃತ ವರದಿಯನ್ವಯ ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸಿದ್ಧಪಡಿಸಿರುವ ಮಸೂದೆಯನ್ನು ಸದನದಲ್ಲಿ ಮಂಡಿಸುವ ಬಗ್ಗೆ | ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |
| 3 | **ಶ್ರೀ ಮರಿತಿಬ್ಬೇಗೌಡ** | 24.09.2020 | ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿಗೆ ಎಂ.ಸಿ.ಐನವರು ಅನುಮತಿ ನೀಡಿದ್ದು, ಸದರಿ ಕೋರ್ಸುಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ಬೋಧಕ ಸಿಬ್ಬಂದಿಗಳ ಕೊರತೆ ಇರುತ್ತದೆ. ಸರ್ಕಾರ ಪ್ರಸ್ತುತ ಬೋಧಕ ಹುದ್ದೆಗಳನ್ನು ಸೃಜಿಸಲು ಸಾಧ್ಯವಿಲ್ಲವೆಂದು ಕೋರ್ಸುಗಳನ್ನು ಪ್ರಾರಂಭಿಸುವುದನ್ನು ಕೈಬಿಡಲು ತಿಳಿಸಿರುವುದರಿಂದ ಉಂಟಾಗಿರುವ ಸಮಸ್ಯೆ ಕುರಿತು | ದಿನಾಂಕ:26.09.2020ರಂದು ಉತ್ತರಿಸಲಾಯಿತು. |
| 4 | **ಶ್ರೀಮತಿ ಎಸ್.ವೀಣಾ ಅಚ್ಚಯ್ಯ** | 25.09.2020 | ತಲಕಾವೇರಿಯಲ್ಲಿ ಬೆಟ್ಟಗಳು ಕುಸಿಯದಂತೆ ಪರಿಣಿತರ ನೇತೃತ್ವದಲ್ಲಿ ಕಾರ್ಯಯೋಜನೆಯನ್ನು ಕೈಗೊಳ್ಳುವ ಬಗ್ಗೆ | ಉತ್ತರಿಸಲಾಯಿತು. |

**ವಿವರಣಾ ಪಟ್ಟಿ – 7**

**ಶಾಸನ ರಚನೆ**

| ಕ್ರ ಸಂ | ವಿಧೇಯಕದ ಹೆಸರು | ವಿ ಸ ಅಂಗೀಕರಿಸಿರುವ ದಿನಾಂಕ | ವಿ ಪ ಅಂಗೀಕರಿಸಿರುವ ದಿನಾಂಕ |
|---|---|---|---|
| 1 | **ವಿ ಸಂಖ್ಯೆ..11/2020**<br>**ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ,2020**<br>**The Karnataka Town and Country Planning (Amendment) Bill, 2020** | 23.03.2020 | 23.09.2020 |
| 2. | **ವಿ ಸಂಖ್ಯೆ..14/2020**<br>**ಕರ್ನಾಟಕ ರೇಸ್ ಕೋರ್ಸುಗಳಿಗೆ ಪರವಾನಗಿ ನೀಡುವ (ತಿದ್ದುಪಡಿ) ವಿಧೇಯಕ,2020**<br>**The Karnataka Race Courses Licensing (Amendment) Bill, 2020** | 23.03.2020 | 23.09.2020 |
| 3 | **ವಿ ಸಂಖ್ಯೆ..16/2020**<br>ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ,2020<br>The Sarvajna Kshetra Development Authority Bill, 2020 | 24.03.2020 | 23.09.2020 |
| 4 | **ವಿ ಸಂಖ್ಯೆ..07/2020**<br>**ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ)ವಿಧೇಯಕ,2020**<br>**The Industrial Disputes (Karnataka Amendment) Bill,2020** | 23.03.2020 | 23.09.2020 |
| 5 | **ವಿ ಸಂಖ್ಯೆ..08/2020**<br>**ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ,2020**<br>**The Karnataka Shops and Commercial Establishments (Amendment) Bill,2020** | 23.03.2020 | 23.09.2020 |
| 6 | **ವಿ ಸಂಖ್ಯೆ..23/2020**<br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ,2020<br>The Karnataka Agricultural Produce Marketing (Regulation and Development) (Amendment) Bill, 2020 | 24.03.2020 | 23.09.2020 |

| | | | |
|---|---|---|---|
| 7 | **ವಿ ಸಂಖ್ಯೆ..24/2020**<br>ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವ ವಿಧೇಯಕ,2020<br>The Karnataka Repealing of Certain Enactments and Regional Laws Bill, 2020 | 24.03.2020 | 23.09.2020 |
| 8 | ವಿ.ಸ.29/2020<br>ಕರ್ನಾಟಕ ವಿಧಾನ ಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು ಹಾಗೂ ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2020<br>The Karnataka Legislature Salaries, Pensions and Allowances and Certain Other Law (Amendment) Bill, 2020 | 22.09.2020 | 24.09.2020 |
| 9 | ವಿ.ಸಂ.27/2020<br>ಕರ್ನಾಟಕ ಭಿಕ್ಷಾಟನೆ ನಿಷೇಧ (ತಿದ್ದುಪಡಿ) ವಿಧೇಯಕ, 2020<br>The Karnataka Prohibition of Beggary (Amendment) Bill, 2020 | 22.09.2020 | 24.09.2020 |
| 10 | ವಿ.ಸಂ.38/2020<br>ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ,2020<br>The Karnataka Private Medical Establishments (Amendment) Bill, 2020 | 22.09.2020 | 24.09.2020 |
| 11 | ವಿ.ಸ.34/2020<br>ಕನ್ನಡ ವಿಶ್ವವಿದ್ಯಾನಿಲಯ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2020<br>The Kannada University and Certain other Laws (Amendment) Bill, 2020 | 22.09.2020 | 24.09.2020 |
| 12. | ವಿ.ಸಂ.30/2020<br>ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ) ವಿಧೇಯಕ,2020<br>The Karnataka Lokayukta (Second Amendment) Bill, 2020 | 23.09..2020 | 24.09.2020 |
| 13 | ವಿ.ಸಂ.32/2020<br>ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಸಾರ್ವಜನಿಕ ವಲಯದ ಸಂಸ್ಥೆಗಳ ನೌಕರರ ಸೇವೆಗಳನ್ನು ಸಾರ್ವಜನಿಕ ಸೇವೆಗೆ ವಿಲೀನಗೊಳಿಸುವುದಕ್ಕೆ ನಿಷೇಧ) ವಿಧೇಯಕ, 2020<br>The Karnataka State Civil Services (Prohibition of Absorption of the Services of the Employees of Establishments in Public Sector in to Public Services) | 23.09..2020 | 24.09.2020 |

| | | | |
|---|---|---|---|
| | Bill, 2020 | | |
| 14 | **ವಿ ಸಂಖ್ಯೆ..35/2020**<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2020<br>The Karnataka State Open University (Amendment) Bill, 2020 | 23.09..2020 | 24.09.2020 |
| 15 | ವಿ.ಸಂ.31/2020<br>ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಎರಡನೇ ತಿದ್ದುಪಡಿ) ವಿಧೇಯಕ, 2020<br>The Karnataka Town and Country Planning (Second Amendment) Bill, 2020 | 23.09..2020 | 24.09.2020 |
| 16 | **ವಿ ಸಂಖ್ಯೆ..33/2020**<br>ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2020<br>The Karnataka Industrie (Facilitation) (Amendment) Bill, 2020 | 23.09.2020 | 25.09.2020 |
| 17 | ವಿ.ಸಂ.28/2020<br>ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ, 2020<br>The Karnataka Municipalities (Amendment) Bill, 2020 | 23.09..2020 | 25.09.2020 |
| 18 | **ವಿ ಸಂಖ್ಯೆ..60/2020**<br>ಕರ್ನಾಟಕ ನಗರ ಪಾಲಿಕೆಗಳ (ಮೂರನೇ ತಿದ್ದುಪಡಿ) ವಿಧೇಯಕ,2020<br>The Karnataka Municipal Corporations (Third Amendment) Bill, 2020 | 23.09..2020 | 25.09.2020 |
| 19 | ವಿ.ಸಂ.44/2020<br>ಕರ್ನಾಟಕ ಸಾಂಕ್ರಾಮಿಕ ರೋಗಗಳ ವಿಧೇಯಕ,2020<br>The Karnataka Epidemic Diseases Bill, 2020 | 23.09..2020 | 25.09.2020 |
| 20 | **ವಿ ಸಂಖ್ಯೆ..51/2020**<br>ಕರ್ನಾಟಕ ಧನವಿನಿಯೋಗ (ಸಂಖ್ಯೆ.3) ವಿಧೇಯಕ, 2020<br>The Karnataka Appropriation (No.3) Bill, 2020 | 24.09.2020 | 26.09.2020 |
| 21 | ವಿ.ಸಂ.52/2020<br>ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ವಿಧೇಯಕ, 2020<br>The Karnataka Contingency Fund (Amendment) Bill, 2020 | 24.09.2020 | 26.09.2020 |
| 22 | ವಿ.ಸ.50/2020<br>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ,2020<br>The Bangalore Development Authority (Amendment) Bill, 2020 | 25.09.2020 | 26.09.2020 |

| | | | |
|---|---|---|---|
| | | | |
| 23 | **ವಿ ಸಂಖ್ಯೆ..48/2020**<br>ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2020<br>The Karnataka Good and Services Tax Amendment) Bill, 2020 | 25.09.2020 | 26.09.2020 |
| 24 | **ವಿ ಸಂಖ್ಯೆ..53/2020**<br>ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ,2020<br>The Karnataka Fiscal Responsibility (Amendment) Bill, 2020 | 25.09.2020 | 26.09.2020 |
| 25 | **ವಿ ಸಂಖ್ಯೆ..45/2020**<br>ಕರ್ನಾಟಕ ನಗರಪಾಲಿಕೆಗಳ (ಎರಡನೇ ತಿದ್ದುಪಡಿ) ವಿಧೇಯಕ,2020<br>The Karnataka Municipal Corporations (Second Amendment) Bill,2020 | 25.09.2020 | 26.09.2020 |
| 26 | ವಿ.ಸಂ.62/2020<br>ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಮೂರನೇ ತಿದ್ದುಪಡಿ) ವಿಧೇಯಕ, 2020<br>The Karnataka Town and Country Planning (Third Amendment) Bill, 2020 | 25.09.2020 | 26.09.2020 |
| 27 | ವಿ. ಸಂ.46/2020<br>ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ವಿಧೇಯಕ, 2020<br>The Karnataka State Civil Service (Regulation of Transfer of Staff of Department of Collegiate Education) (Repeal) Bill, 2020 | 25.09.2020 | 26.09.2020 |
| 28 | ವಿ.ಸಂ.41/2020<br>ಕರ್ನಾಟಕ ಸ್ಟಾಂಪು (ತಿದುಪಡಿ) ವಿಧೇಯಕ, 2020<br>The Karnataka Stamp (Amendment) Bill, 2020 | 25.09.2020 | 26.09.2020 |
| 29 | **ವಿ ಸಂಖ್ಯೆ..57/2020**<br>ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2020<br>The Karnataka Land Revenue (Second Amendment) Bill, 2020 | 25.09.2020 | 26.09.2020 |
| 30 | ವಿ. ಸಂ. 59/2020<br>ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2020<br>Lakkundi Heritage Area Development Authority Bill, | 25.09.2020 | 26.09.2020 |

| | | | |
|---|---|---|---|
| | 2020 | | |
| 31 | ವಿ.ಸ.47/2020<br>ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ವಿಧೇಯಕ, 2020<br>The Karnataka State Civil Services (Regulation of Transfer of Staff of Departmentof Teachnical Education) (Repeal) Bill, 2020 | 25.09.2020 | 26.09.2020 |
| 32 | **ವಿ ಸಂಖ್ಯೆ..49/2020**<br>ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯನಿರ್ಣಯ (ತಿದ್ದುಪಡಿ) ವಿಧೇಯಕ, 2020<br>The Karnataka Court Fees and Suits Valuation (Amendment) Bill, 2020 | 25.09.2020 | 26.09.2020 |
| 33 | ವಿ.ಸ.37/2020<br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2020<br>The Karnataka Gram Swaraj and Panchayat Raj (Amendment) Bill, 2020 | 26.09.2020 | 26.09.2020 |
| 34 | ವಿ ಸ.64/2020<br>ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ನಾಲ್ಕನೇ ತಿದ್ದುಪಡಿ) ವಿಧೇಯಕ, 2020<br>The Karnataka Town and Country Planning (Fourth Amendment) Bill, 2020 | 26.09.2020 | 26.09.2020 |
| 35 | ವಿ.ಸ.43/2020<br>ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2020<br>The Karnataka Land Revenue (Amendment) Bill, 2020 | 26.09.2020 | 26.09.2020 |
| 36 | ವಿ.ಸ.36/2020<br>ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2020<br>The Karnataka Regulation of Stone Crushers (Amendment) Bill, 2020 | 23.09.2020 | 24.09.2020 |
| 37 | ವಿ.ಸಂ40/2020<br>ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ, 2020<br>The Karnataka land Grabbing Prohibition (Amendment) Bill, 2020 | 26.09.2020 | 26.09.2020 |

## ಹಿಂಪಡೆಯಲಾದ ವಿಧೇಯಕಗಳು

| ಕ್ರ ಸಂ | ವಿಧೇಯಕದ ಹೆಸರು | ದಿನಾಂಕ |
|---|---|---|
| 1 | ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2020 | 22.09.2020 |
| 2 | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2020 | 22.09.2020 |
| 3 | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017 | 26.09.2020 |

## ತಿರಸ್ಕರಿಸಲಾದ ವಿಧೇಯಕ

| ಕ್ರ ಸಂ | ವಿಧೇಯಕದ ಹೆಸರು | ದಿನಾಂಕ |
|---|---|---|
| 1 | ಕೈಗಾರಿಕಾ ವಿವಾದಗಳು ಮತ್ತು ಕೆಲವು ಕಾನೂನುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2020 | 26.09.2020 |